**ದಿಃ05.06.2018 ರಂದು ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯವಿಚಾರಣೆಃ ವಾದಿ ಪರ ಶ್ರೀ ವಕೀಲರಿಂದಃ**

5 ಧೃಡೀಕೃತ ಕ್ರಯಪತ್ರದ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿ.ಡಿ.1 ರಿಂದ 5 ಎಂದು, ಅಧಿಕಾರಿಪತ್ರವನ್ನು ನಿ.ಡಿ.6 ಎಂದು ಗುರುತಿಸಲಾಯಿತು.

(ಕೋರಿಕೆ ಮೇರೆಗೆ ಪಾಟೀಸವಾಲನ್ನು ಮುಂದೂಡಲಾಯಿತು).

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು,

(ಎಂ.ಹೆಚ್.ಶಾಂತ)
9ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು.

**ದಿಃ19.06.2018 ರಂದು ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು.**

**ಪಾಟಿಸವಾಲುಃ ಪ್ರತಿವಾದಿ ಪರವಾಗಿ ಶ್ರೀ ವಕೀಲರಿಂದಃ**

ನಾನು ದ್ವಿತಿಯ ಪಿಯುಸಿಯನ್ನು ಪಾಸು ಮಾಡಿರುವುದಿಲ್ಲ. ನನ್ನ ತಂದೆಯ ಹೆಸರು ಮುನಿಹನುಮಪ್ಪ, ತಾಯಿಯ ಹೆಸರ ಪಾಪಮ್ಮ. ನನ್ನ ತಂದೆಗೆ ಒಟ್ಟು ಏಳು ಜನ ಮಕ್ಕಳು. ಅವರುಗಳು ನನ್ನ ಅಕ್ಕ ದೊಡ್ಡನಾಗಮ್ಮ, 2ನೇ ಅಕ್ಕ ಚಿಕ್ಕನಾಗಮ್ಮ ಮೃತಪಟ್ಟಿರುತ್ತಾರೆ, ನನ್ನ ಅಣ್ಣ ಮುನಿರೆಡ್ಡಿ, ನನ್ನ ಅಕ್ಕ ಪಾರ್ವತಮ್ಮ ಹಾಗೂ ನನ್ನ ಅಣ್ಣ ಶ್ರೀನಿವಾಸರೆಡ್ಡಿ ಇವರು ಮೃತಪಟ್ಟಿರುತ್ತಾರೆ, ನನ್ನ ಇನ್ನೊಬ್ಬ ಅಕ್ಕ ಮುನಿರತ್ನಮ್ಮ ಹಾಗೂ ನಾನು ನಾರಾಯಣರೆಡ್ಡಿ ಆಗಿರುತ್ತೇವೆ. ನನ್ನ ತಂದೆ ಇಲ್ಲಿಗೆ 30 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನನ್ನ ತಾಯಿ ಮೃತಪಟ್ಟು ಇಲ್ಲಿಗೆ 15 ವರ್ಷ ಆಗಿರುತ್ತದೆ. ದಿಃ 13.6.1961 ನನ್ನ ಜನ್ಮದಿನಾಂಕ. 1972 ರಲ್ಲಿ ನನಗೆ 11 ವರ್ಷ ವಯಸ್ಸಾಗಿತ್ತು. ನನ್ನ ತಂದೆ ಮೃತಪಟ್ಟ ನಂತರ ನನ್ನ ತಂದೆಯ ಆಸ್ತಿಗಳನ್ನು ಭಾಗ ಮಾಡಿಕೊಂಡಿರುವುದಿಲ್ಲ. ನಮ್ಮ ಕುಟುಂಬದಲ್ಲಿ ವಿಭಾಗ ಆಗಿರುವುದಿಲ್ಲ. ನನಗೆ ದಾವಾ ಸ್ವತ್ತುಗಳು ಗೊತ್ತು. ದಾವಾ ಸ್ವತ್ತುಗಳು ನನ್ನ ತಂದೆ ಮುನಿಹನುಮಪ್ಪನಿಂದ ಬಂದ ಸ್ವತ್ತುಗಳಾಗಿರುತ್ತವೆ ಅಂದರೆ ಸರಿ. ನಾವು ಯಾವುದೇ ಸ್ವತ್ತುಗಳನ್ನು ಕೊಂಡು ಕೊಂಡಿರುವುದಿಲ್ಲ ಅಂದರೆ ಸರಿ.

2011 ರಲ್ಲಿ ನಿ.ಡಿ.4 ಮತ್ತು 5 ರಂತೆ ಆದರ್ಶ ನೆಸ್ಟ್ ಪ್ರೈ ಲಿಮಿಡೆಟ್‌ರವರಿಗೆ ಸ್ವತ್ತುಗಳನ್ನು ಮಾರಾಟ ಮಾಡಿರುತ್ತೇವೆ. ಸ.ನಂ.74ಃ2 ರಲ್ಲಿ 21 ಗುಂಟೆ ಜಮಿನನ್ನು 1,13,21,250-00 ರೂ.ಗಳಿಗೆ ಮಾರಾಟ ಮಾಡಿರುತ್ತೇನೆ ಅಂದರೆ ಸಾಕ್ಷಿಯು ಸ್ವತ್ತನ್ನು ಮಾರಾಟ ಮಾಡಿರುವುದಾಗಿ ಮಾರಾಟ ಮಾಡಿದ ಹಣ ಈಗ ನೆನಪಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸ.ನಂ.75ಃ4 ರಲ್ಲಿ 36 ಗುಂಟೆ ಜಮಿನನ್ನು 1,92,78,750-00 ರೂ.ಗಳಿಗೆ ಮಾರಾಟ ಮಾಡಿರುತ್ತೇನೆ ಅಂದರೆ ಸಾಕ್ಷಿಯು ಸ್ವತ್ತನ್ನು ಮಾರಾಟ ಮಾಡಿರುವುದಾಗಿ ಮಾರಾಟ ಮಾಡಿದ ಹಣ ಈಗ ನೆನಪಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸದರೀ ಕ್ರಯಪತ್ರಗಳಲ್ಲಿ ವಾದಿಗಳು ಸಹ ಪಕ್ಷಕಾರರಾಗಿರುತ್ತಾರೆ ಅಂದರೆ ಸರಿ. ವಾದಿಗಳಿಗೆ ತಲಾ 5 ಲಕ್ಷ ರೂ.ಗಳನ್ನು ಕೊಟ್ಟಿರುತ್ತೇವೆ. ಸ.ನಂ. 65 ಹಾಗೂ 66 ಸ್ವತ್ತುಗಳಿಗೆ ಸಂಬಂಧಿಸಿದಂತೆ ಆರ್.ಟಿ.ಸಿ.ಗಳನ್ನು ಹಾಜರುಪಡಿಸಿರುವುದಿಲ್ಲ.

ಈ ದಾವೆ ನಡೆಯುತ್ತಿರುವಾಗ ವಾದಿಗಳು ಹಾಗೂ ಪ್ರತಿವಾದಿಗಳಾದ ನಾವುಗಳು ಸೋಮಶೇಖರ್ ಎಂಬುವವರಿಗೆ ಸಾಮಾನ್ಯ ಅಧಿಕಾರಪತ್ರವನ್ನು ಸ.ನಂ.53ಃ3 2ವರೆ ಗುಂಟೆ ಸ್ವತ್ತಿಗೆ ಸಂಬಂಧಪಟ್ಟಂತೆ ಬರೆದುಕೊಟ್ಟಿರುತ್ತೇವೆ ಅಂದರೆ ಸರಿ. ವಾದಿಗಳನ್ನು ನಾವು ಸಾಮಾನ್ಯ ಅಧಿಕಾರಪತ್ರವನ್ನು ನೊಂದಾಯಿಸಲು ದಿಃ 8.9.2016 ರಂದು ಕರೆಸಿರುತ್ತೇವೆ ಅಂದರೆ ಸರಿ. 1ನೇ

ವಾದಿ ವಿದ್ಯಾಭ್ಯಾಸ ಮಾಡಿರುವುದಿಲ್ಲ, 2ನೇ ವಾದಿ ವಿದ್ಯಾಭ್ಯಾಸ ಮಾಡಿರುತ್ತಾರೆ. ಅದೇ ದಿನ ವಾದಿಗಳಿಂದ ನಾನು ಹಕ್ಕುಬಿಡುಗಡೆ ಪತ್ರವನ್ನು ಬರೆಸಿಕೊಂಡಿರುತ್ತೇನೆ ಅಂದರೆ ಸರಿ. ಆ ದಿನ ನಾವು ಸಾಮಾನ್ಯ ಅಧಿಕಾರಪತ್ರವನ್ನು ಬರೆಸಿಕೊಳ್ಳುತ್ತೇವೆ ಎಂದು ಹೇಳಿ ವಾದಿಗಳಿಂದ ಮೋಸದಿಂದ ಹಕ್ಕು ಬಿಡುಗಡೆ ಪತ್ರವನ್ನು ಬರೆಸಿಕೊಂಡಿರುತ್ತೇವೆ ಅಂದರೆ ಸರಿಯಲ್ಲ. ವಾದಿಗಳಿಗೆ ಹಕ್ಕುಬಿಡುಗಡೆ ಪತ್ರದ ಬಗ್ಗೆ ಹೇಳದೆ ಮೋಸದಿಂದ ಬರೆಸಿಕೊಂಡಿರುತ್ತೇವೆ ಅಂದರೆ ಸರಿಯಲ್ಲ.

ತಕರಾರುಪತ್ರದಲ್ಲಿರುವ ಸಹಿಗಳು ನನ್ನವು. ಸದರೀ ತಕರಾರು ಪತ್ರಗಳನ್ನು ನಾನು ದಿಃ 14.9.2017 ರಂದು ಹಾಕಿರುತ್ತೇನೆ ಅಂದರೆ ಸರಿ. ತಕರಾರು ಪತ್ರದಲ್ಲಿ ಹಕ್ಕುಬಿಡುಗಡೆ ಪತ್ರವನ್ನು ವಾದಿಗಳು ಬರೆದುಕೊಟ್ಟಿರುವ ಬಗ್ಗೆ ತಿಳಿಸಿರುತ್ತೇನೆ. ಹಕ್ಕುಬಿಡುಗಡೆ ಪತ್ರವನ್ನು ನಾನು ಮೋಸದಿಂದ ಬರೆಸಿಕೊಂಡಿದ್ದರಿಂದ ನಾನು ಹಕ್ಕುಬಿಡುಗಡೆಯ ಪತ್ರದ ಬಗ್ಗೆ ನಾನು ತಕರಾರು ಪತ್ರದಲ್ಲಿ ತಿಳಿಸಿರುವುದಿಲ್ಲ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಸಾಕ್ಷಿ ಪ್ರಮಾಣಪತ್ರದಲ್ಲಿ ವಾದಿಗಳು ಹಕ್ಕು ಬಿಡುಗಡೆ ಪತ್ರವನ್ನು ಬರೆದು ಕೊಟ್ಟಿರುತ್ತಾರೆ ಎಂಬುದನ್ನು ತಿಳಿಸಿರುವುದಿಲ್ಲ. ಸಾಕ್ಷಿಯು ತಾನಾಗಿಯೇ ಹೇಳುತ್ತಾರೆ ಸ್ವತ್ತುಗಳನ್ನು ಸೇರಿಸಿದ ನಂತರ ತಮಗೆ ಹಕ್ಕು ಬಿಡುಗಡೆ ಪತ್ರದ ಬಗ್ಗೆ ಹಾಗೂ ಮಾರಾಟ ಮಾಡಿದ ಪತ್ರಗಳನ್ನು

ವಾದಿಗಳು ನ್ಯಾಯಾಲಯಕ್ಕೆ ಸಲ್ಲಿಸಿರುವ ಬಗ್ಗೆ ಗೊತ್ತಾಗಿರುವುದಾಗಿ ನುಡಿದಿರುತ್ತಾರೆ. ಈಗ ತೋರಿಸಿದ ಆರ್‌ಟಿಸಿಯಲ್ಲಿರುವ ಸ.ನಂ.75ಃ4 ಸ್ವತ್ತು ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿಯಾಗಿರುತ್ತದೆ. ಈಗ ತೋರಿಸಿದ ಆರ್‌ಟಿಸಿಯಲ್ಲಿರುವ ಸ.ನಂ.74 ಸ್ವತ್ತು ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿಯಾಗಿರುತ್ತದೆ ಸದರೀ ಸ್ವತ್ತುಗಳು ಭೋಗನಹಳ್ಳಿ ಗ್ರಾಮದಲ್ಲಿ ಇರುತ್ತದೆ ಅಂದರೆ ಸರಿ. ಸ.ನಂ. 130ಃ9ರ ಸ್ವತ್ತು ದೊಡ್ಡಕನ್ನಲ್ಲಿ ಇದ್ದು ಅದು ನಮಗೆ ಸೇರಿದ ಆಸ್ತಿಯಾಗಿರುತ್ತದೆ. ಸ.ನಂ. 53ಃ8 2ವರೆ ಗುಂಟೆ ವಿಸ್ತೀರ್ಣದ ಸ್ವತ್ತು ದೊಡ್ಡಕನ್ನಲ್ಲಿಯಲ್ಲಿದ್ದು ನಮ್ಮ ಕುಟುಂಬಕ್ಕೆ ಸೇರಿದ್ದಾಗಿರುತ್ತದೆ ಅಂದರೆ ಸರಿ. ಸ.ನಂ. 53ಃ3 2ವರೆ ಗುಂಟೆ ವಿಸ್ತೀರ್ಣದ ಸ್ವತ್ತು ದೊಡ್ಡಕನ್ನಲ್ಲಿಯಲ್ಲಿದ್ದು ನಮ್ಮ ಕುಟುಂಬಕ್ಕೆ ಸೇರಿದ್ದಾಗಿರುತ್ತದೆ ಅಂದರೆ ಸರಿ. ಸಾಕ್ಷಿಯು ತಾನಾಗಿಯೇ ಸದರೀ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿರುವುದಿಲ್ಲ ಎಂದು ಅವು ನಮ್ಮ ತಾತಾ ಹಾಗೂ ಅವರ ಮಕ್ಕಳ ನಡುವೆ ವಿಭಾಗವಾಗಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸದರೀ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳಾಗಿರುತ್ತವೆ.

(ಕೋರಿಕೆ ಮೇರೆಗೆ ಮುಂದುವರಿದ ಪಾಟೀಸವಾಲನ್ನು ಮುಂದೂಡಲಾಯಿತು).

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು,

(ಎಂ.ಹೆಚ್.ಶಾಂತ)
9ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು.